# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1386 |
| ಮಾನ್ಯ ಸದಸ್ಯರ ಹೆಸರು | ಶ್ರೀ ಎಸ್ ಎಲ್ ಭೋಜೇಗೌಡ (ಶಿಕ್ಷಣ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 30/12/2022 |
| ಉತ್ತರಿಸುವವರು | ಮಾನ್ಯ ಕಾರ್ಮಿಕ ಸಚಿವರು |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಖಾಸಗಿ ಕಂಪನಿಗಳಲ್ಲಿ ಮತ್ತು ಗಾರ್ಮೆಂಟ್ಸ್‌ಗಳಲ್ಲಿ ವಿವಿಧ ಬಗೆಯ ಕಾರ್ಮಿಕರು ಕೆಲಸ ನಿರ್ವಹಿಸುತ್ತಿರುವುದರಿಂದ, ಸರ್ಕಾರ ಕಾರ್ಮಿಕರಿಗೆ ಎಷ್ಟು ಕನಿಷ್ಠ ವೇತನವನ್ನು ನಿಗದಿ ಮಾಡಿದೆ. | ಖಾಸಗಿ ಕಂಪನಿಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಸಂಬಂಧಿಸಿದಂತೆ, ಒಟ್ಟು 83 ಉದ್ದಿಮೆಗಳನ್ನು ಕನಿಷ್ಠ ವೇತನ ಕಾಯ್ದೆ 1948ರ ಅನುಸೂಚಿಗೆ ಸೇರ್ಪಡೆಗೊಳಿಸಿ, ಕಾಯ್ದೆಯ ನಿಯಮ 3(1)ಬಿ ರನ್ವಯ 5 ವರ್ಷಗಳ ಅವಧಿ ಮೀರದಂತೆ ಕನಿಷ್ಠ ವೇತನ ದರಗಳನ್ನು ಪರಿಷ್ಕರಿಸಲಾಗುತ್ತಿದೆ. 83 ಅನುಸೂಚಿತ ಉದ್ದಿಮೆಗಳಲ್ಲಿ "ಬಟ್ಟೆಗಳ ತಯಾರಿಕೆ (ಗಾರ್ಮೆಂಟ್ಸ್), ವಸ್ತ್ರ ವಿನ್ಯಾಸ (ಕಾಸ್ಟ್ಯೂಮ್ಸ್) ಮತ್ತು ಟೈಲರಿಂಗ್ ಉದ್ದಿಮೆಗಳಲ್ಲಿ ಉದ್ಯೋಗ" ಅನುಸೂಚಿತ ಉದ್ದಿಮೆಯನ್ನೂ ಒಳಗೊಂಡಿರುತ್ತದೆ.<br>ಸದರಿ ಅನುಸೂಚಿತ ಉದ್ದಿಮೆಗಳಿಗೆ 2022-23 ನೇ ಸಾಲಿಗೆ ಅನ್ವಯವಾಗುವ ಕನಿಷ್ಠದಿಂದ ಗರಿಷ್ಠ ವೇತನ ದರಗಳ ಪಟ್ಟಿಯನ್ನು **ಅನುಬಂಧ-1** ರಲ್ಲಿ ಒದಗಿಸಿದೆ. |
| ಆ) | ಈ ಕಾರ್ಮಿಕರಿಗೆ ಸರ್ಕಾರ ನಿಗದಿಪಡಿಸಿರುವ ವೇತನವು ಬಹಳ ಕಡಿಮೆಯಾಗಿರುವುದರಿಂದ, ಮತ್ತು ಬೆಲೆಗಳು ಏರಿಕೆಯಾಗಿರುವುದರಿಂದ, ಸದರಿ ಕಾರ್ಮಿಕರಿಗೆ ವೇತನವನ್ನು ಹೆಚ್ಚಳ ಮಾಡಲು ಸರ್ಕಾರ ಯಾವ ಕ್ರಮವನ್ನು ಕೈಗೊಂಡಿದೆ? | ರಾಜ್ಯ ಸರ್ಕಾರವು ಕನಿಷ್ಠ ವೇತನ ಕಾಯ್ದೆ, 1948 ರ ಕಲಂ 5(1)(ಎ) ಹಾಗೂ ಕಲಂ 5(1)(ಬಿ) ರಡಿ ವಿಧಿಸಿರುವ ಪ್ರಾವಧಾನಗಳನ್ವಯ ಗೌರವಾನ್ವಿತ ಭಾರತದ ಸರ್ವೋಚ್ಚ ನ್ಯಾಯಾಲಯವು ಮೆ: ರೆಪ್ಟೋಕಾಸ್ ಬ್ರೆಟ್ ಅಂಡ್ ಕಂಪನಿ ಲಿಮಿಟೆಡ್, ಪ್ರಕರಣದಲ್ಲಿ ನೀಡಿರುವ ತೀರ್ಪು (1992 ಎಐಆರ್ 504) ಹಾಗೂ ಶ್ರೀ ವಿ. ಶಾಂತಪ್ಪ ಸಮಿತಿಯ ವರದಿಗಳನ್ನಾಧರಿಸಿ ಕನಿಷ್ಠ ವೇತನ ನಿಗದಿ ಮಾಡುವ ಕ್ರಮವನ್ನು ಕೈಗೊಳ್ಳುತ್ತದೆ. ನಿಗದಿಪಡಿಸಿದ ವೇತನಕ್ಕೆ, ಪ್ರತಿ ವರ್ಷ ಏರಿಕೆಯಾಗುವ ಗ್ರಾಹಕ ಬೆಲೆ ಸೂಚ್ಯಂಕಕ್ಕನುಗುಣವಾಗಿ ವ್ಯತ್ಯಸ್ಥ ತುಟ್ಟಿಭತ್ಯೆಯನ್ನು ಸೇರಿಸಿ ಲೆಕ್ಕಾಚಾರ ಮಾಡಿ ಏಪ್ರಿಲ್-01 ರಿಂದ ಜಾರಿಗೆ ಬರುವಂತೆ ಪ್ರಕಟಿಸಲಾಗುತ್ತದೆ.<br>ಮುಂದುವರಿದು ಕನಿಷ್ಠ ವೇತನ ಕಾಯ್ದೆ, 1948 ರ ಕಲಂ 3(1)ಬಿ ರ ಪ್ರಾವಧಾನಗಳನ್ವಯ ಎಲ್ಲಾ ಅನುಸೂಚಿತ ಉದ್ದಿಮೆಗಳಿಗೂ 5 ವರ್ಷಗಳಿಗೊಮ್ಮೆ ಕನಿಷ್ಠ ವೇತನ ದರಗಳನ್ನು ಪರಿಷ್ಕರಿಸಲಾಗುತ್ತದೆ. |

ಕಾಇ 663 ಎಲ್‌ಡಬ್ಲ್ಯೂಎ 2022

(ಅರಬೈಲ್ ಶಿವರಾಂ ಹೆಬ್ಬಾರ್)
ಕಾರ್ಮಿಕ ಸಚಿವರು